**OS.No.39**/2024
**ಪಿ ಡಬ್ಲ್ಯೂ: 1**

**ದಿ: 16-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1, 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಜಿ ಆರ್ ವಕೀಲರಿಂದ**

ಈ ದಾವೆಯನ್ನು ಸ.ನಂ. 4/2 ರಲ್ಲಿ 1988 ರಲ್ಲಿ ನನ್ನ ಹೆಸರಿಗೆ ನೋಂದಣಿಯಾಗಿದ್ದು ಅದಕ್ಕೆ ಖಾತೆ ಮಾಡಿಕೊಡುವಂತೆ ಈ ದಾವೆ ದಾಖಲಿಸಿರುತ್ತೇನೆ. 1988 ರಲ್ಲಿ ವಿಭಾಗ ಪತ್ರ ಆಗಿತ್ತು. 1988 ರಲ್ಲಿ ಆದ ವಿಭಾಗ ಪತ್ರಕ್ಕೆ ನಾನು, ನನ್ನ ತಂದೆ, 4 ನೇ ಪ್ರತಿವಾದಿ ಮತ್ತು ಅಲ್ಪವಯಿ 3 ನೇ ಪ್ರತಿವಾದಿ ಪರವಾಗಿ ನನ್ನ ತಂದೆ ಸಹಿ ಮಾಡಿದ್ದರು ಎಂದರೆ ಸರಿ. ಸದರಿ ವಿಭಾಗ ಪತ್ರಕ್ಕೆ 1 ಮತ್ತು 2 ನೇ ಪ್ರತಿವಾದಿಯರು ಸಹಿ ಮಾಡಿಲ್ಲ ಎಂದರೆ ಸರಿ. 1988 ರಲ್ಲಿ ಆದ ವಿಭಾಗ ಪತ್ರದ ಪ್ರಕಾರ ಇಲ್ಲಿಯವರೆಗೂ ಯಾರ ಹೆಸರಿನಲ್ಲಿಯೂ ಖಾತೆಯಾಗಿಲ್ಲ ಎಂದರೆ ಸರಿ. ನನ್ನ ತಂದೆ ಪೆಬ್ರವರಿ 2023 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ವಾದಿ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಪೌತಿ ಆಧಾರದ ಮೇರೆಗೆ ಜಂಟಿ ಖಾತೆಯಾಗಿರುತ್ತದೆ ಎಂದರೆ ಸರಿ. ಪೌತಿ ಆಧಾರದ ಮೇರೆಗೆ ಜಂಟಿ ಖಾತೆಯಾಗಿರುವುದು ತಪ್ಪು ಇರುತ್ತದೆ ವಿಭಾಗ ಪತ್ರದ ಆಧಾರದ ಮೇರೆಗೆ ಖಾತೆ ಬದಲಾವಣೆ ಮಾಡಬೇಕು ಎಂದು ನಾನು ತಹಶೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿಗಳ ಮುಂದೆ ಪ್ರಶ್ನೆ ಮಾಡಿರುತ್ತೇನೆ. ತಹಶೀಲ್ದಾರ್ ರವರ ಕೊಟ್ಟ ಹಿಂಬರಹವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ, ಉಪವಿಭಾಗಾಧಿಕಾರಿಗಳು ಮಾಡಿದ ಆದೇಶದ ಬಗ್ಗೆ ನನಗೆ ಮಾಹಿತಿ ಬಂದಿಲ್ಲ. ಉಪವಿಭಾಗಾಧಿಕಾರಿಗಳ ಮುಂದೆ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದೊಡ್ಡಘಟ್ಟ ಮತ್ತು ಲಕ್ಷ್ಮೀಸಾಗರ ಜಮೀನಿಗೆ ಸಂಬಂಧಿಸಿದಂತೆ ನೋಂದಾಯಿತ ಪಾಲು ವಿಭಾಗ ಪತ್ರ ಮಾಡಿಕೊಂಡಿಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ಇಲ್ಲಿವರೆಗೂ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಗಳಲ್ಲಿ ನೋಂದಾಯಿತ ಪಾಲು ವಿಭಾಗ ಪತ್ರ ಆಗಿಲ್ಲ ಎಂದರೆ ಸರಿಯಲ್ಲ. ಸ.ನಂ. 4/2 ನ್ನು ಹೊರತುಪಡಿಸಿ ನಮ್ಮ ಕುಟುಂಬದ ಉಳಿದ ಆಸ್ತಿಗಳಲ್ಲಿ ಯಾವುದೇ ನೋಂದಾಯಿತ ಪಾಲು ವಿಭಾಗ ಪತ್ರ ಆಗಿಲ್ಲ. ಬಸಾಪುರ ಗ್ರಾಮದ ಸ.ನಂ. 7/2 ರಲ್ಲಿ 3 ಎಕರೆ 26 ಗುಂಟೆ, ದೊಡ್ಡಘಟ ಗ್ರಾಮದ ಸ.ನಂ. 54/1 ರಲ್ಲಿ 1 ಎಕರೆ ಮತ್ತು ಲಕ್ಷ್ಮೀಸಾಗರ ಗ್ರಾಮದ ಸ.ನಂ. 7/6 ರಲ್ಲಿ 1 ಎಕರೆ ಮತ್ತು 7/7 ರಲ್ಲಿ 1 ಎಕರೆ 30 ಗುಂಟೆ ಈಗಲೂ ಸಹ ಜಂಟಿ ಖಾತೆಯಲ್ಲಿ ಇರುತ್ತವೆ ಎಂದರೆ ಸರಿ. ದಾವಾದ ಆಸ್ತಿ ಮತ್ತು ಈಗ ಹೇಳಿದ ಆಸ್ತಿಗಳಿಗೆ ನಾನು ಮತ್ತು ಪ್ರತಿವಾದಿಯರು ಜಂಟಿಯಾಗಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸಾಕ್ಷಿಯು ದಾವಾದ ಆಸ್ತಿಯನ್ನು ಹೊರತುಪಡಿಸಿ ಉಳಿದ ಆಸ್ತಿಗಳಲ್ಲಿ ಜಂಟಿ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ನಾನು 30 ವರ್ಷಗಳಿಂದ ಕಡೂರು ನಗರದಲ್ಲಿ ವಾಸವಿರುತ್ತೇನೆ. ನಾನು ಕಡೂರಿನಲ್ಲಿ ಕುಟುಂಬ ಸಮೇತ ವಾಸವಿರುವುದರಿಂದ 3 ನೇ ಪ್ರತಿವಾದಿಯೇ ಮನೆಯ ಯಜಮಾನಿಕೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಇರುವ ಎಲ್ಲಾ

ಆಸ್ತಿಗಳ ಖರ್ಚು ವೆಚ್ಚವನ್ನು 3 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. 1988 ರಲ್ಲಿ ವಿಭಾಗ ಪತ್ರದ ಪ್ರಕಾರ ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ನಾನು ಸರ್ಕಾರಿ ನೌಕರಿಯಲ್ಲಿ ಇರುವ ಕಾರಣ ಖಾತೆ ಮಾಡಿಸಿಕೊಳ್ಳಲು ಆಗಿಲ್ಲ ಎಂದು ನುಡಿಯುತ್ತಾರೆ. 1988 ರಲ್ಲಿ ಆದ ವಿಭಾಗ ಪತ್ರದ ಪ್ರಕಾರ ಖಾತೆ ಮಾಡುವಂತೆ ನಾನು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿದ್ದೆ. ಆ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಕೊಟ್ಟ ಅರ್ಜಿಯ ಪ್ರಕಾರ ಕಂದಾಯ ಇಲಾಖೆಯವರು ಯಾವ ಕಾರಣಕ್ಕೆ ಖಾತೆ ಮಾಡಿಲ್ಲ ಎಂದು ನನಗೆ ಗೊತ್ತಿಲ್ಲ. 1988 ರಲ್ಲಿ ಆದ ವಿಭಾಗ ಪತ್ರವು ಖೊಟ್ಟಿ ಇರುವ ಕಾರಣ ನಾನು ಖಾತೆ ಬದಲಾವಣೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದ ಪ್ರಕಾರ ಖಾತೆ ಬದಲಾವಣೆ ಮಾಡಿಕೊಂಡರೆ 1 ಮತ್ತು 2 ನೇ ಪ್ರತಿವಾದಿಯರಿಗೆ ಗೊತ್ತಾಗುತ್ತದೆ ಎನ್ನುವ ಕಾರಣಕ್ಕೆ ಖಾತೆ ಬದಲಾವಣೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. 1988 ರಲ್ಲಿ ವಿಭಾಗ ಪತ್ರ ಮಾಡಿಕೊಳ್ಳುವಾಗ 1 ಮತ್ತು 2 ನೇ ಪ್ರತಿವಾದಿಯರು ವಯಸ್ಕರು ಆಗಿದ್ದರು ಎಂದರೆ ಸರಿ. ದಾವಾದ ಆಸ್ತಿಯಲ್ಲಿ 1, 2 ಮತ್ತು 4 ನೇಪ್ರತಿವಾದಿಯರಿಗೂ ಸಹ ಸಮಪಾಲು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವುದೋ ಆಮಿಷ ತೋರಿಸಿ ದಾವಾದ ಆಸ್ತಿಗೆ ಸಂಬಂಧಿಸಿದಂತೆ ಮಾತ್ರ ಪಾಲು ವಿಭಾಗ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಹಾಗಾಗಿ ದಾವಾದ ಆಸ್ತಿಯಲ್ಲಿ 1 ರಿಂದ 4 ನೇ ಪ್ರತಿವಾದಿಯರಿಗೂ ಸಹ ಸಮಪಾಲು ಇರುತ್ತದೆ ಎಂದರೆ ಸರಿಯಲ್ಲ. 1 ಮತ್ತು 2 ನೇಪ್ರತಿವಾದಿಯರ ಒಪ್ಪಿಗೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ತಂದೆಯವರಿಗೆ ಗೊತ್ತಿರುತ್ತದೆ. ನನ್ನ ತಂದೆ ಮೃತಪಟ್ಟ ನಂತರ ಪೌತಿ ಆಧಾರದ ಮೇರೆಗೆ ಜಂಟಿ ಖಾತೆ ಆದ ನಂತರ ದಾವಾದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 3 ನೇ ಪ್ರತಿವಾದಿ ಪರ ವಕೀಲರಿಂದ

ಈ ಹಂತದಲ್ಲಿ 3 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.